ಈ) ಇಲ್ಲ

ಉ) ಹಣಕಾಸಿನ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಎಲ್ಲಾ ನೊಂದಾಯಿತ ಫಲಾನುಭವಿಗಳಿಗೆ ವಸತಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ವಿವಿಧ ಯೋಜನೆಗಳಲ್ಲಿನ ಮನೆಗಳ ನಿರ್ಮಾಣದಲ್ಲಿನ ತೊಂದರೆ

4520 (4806) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಇಂದಿರಾ ಆವಾಸ್ ಮತ್ತು ಅಂಬೇಡ್ಕರ್ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆಯಾಗುವವರಿಗೆ ಜಮೀನಿನ ದಾಖಲೆ ಬೇಕೆಂದು ಸರ್ಕಾರ ಕಡ್ಡಾಯಗೊಳಿಸಿದೆಯೇ;

ಆ) ಇಲ್ಲವಾದಲ್ಲಿ ಈ ಕುರಿತು ಸೂಕ್ತ ಆದೇಶವನ್ನು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ನೀಡಲಾಗುವುದೇ;

ಇ) ಆಶ್ರಯ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರು ಫಲಾನುಭವಿಯಾಗಿ ಆಯ್ಕೆಯಾಗಿ ಜಮೀನಿನ ದಾಖಲೆ ಇಲ್ಲದೆ ಮನೆ ನಿರ್ಮಿಸಿಕೊಳ್ಳಲು ಆಗದೇ ನಿಗದಿಪಡಿಸಲಾದ ಗುರಿಗಳು ಹಾಗೆಯೇ ಉಳಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಜಮೀನಿನ ದಾಖಲಾತಿ ಇಲ್ಲದೆ ಇರುವವರಿಗೆ ಮನೆ ನಿರ್ಮಿಸಿಕೊಳ್ಳುವಲ್ಲಿ ಸರ್ಕಾರದ ನಿಲುವೇನು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು)

ಅ) ಈ ಬಗ್ಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಷರತ್ತಿನಲ್ಲಿ ವಿಧಿಸಿರುವುದು ಸರಕಾರದ ಗಮನಕ್ಕೆ ಬಂದಿದೆ.

ಆ) ಮೇಲ್ಕಂಡಂತೆ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಈಗಾಗಲೇ ಆದೇಶ ಹೊರಡಿಸಿದೆ.

ಇ) ಇಲ್ಲ,

ಈ) ಆಶ್ರಯ ಮತ್ತು ಅಂಬೇಡ್ಕರ್ ಮನೆಗಳನ್ನು ಕಟ್ಟಲು ನಿವೇಶನವು ಫಲಾನುಭವಿಗಳ ಹೆಸರಿನಲ್ಲಿ ಇರುವುದು ಕಾನೂನಿನ ಪ್ರಕಾರ ಪ್ರಾಥಮಿಕ ಅವಶ್ಯಕತೆಯಾಗಿದೆ. ಅದಿಲ್ಲದೆ ಸದರಿ ಮನೆಯ ಮೇಲಿನ ಫಲಾನುಭವಿಯ ಮಾಲೀಕತ್ವವನ್ನು ಸಾಬೀತು ಮಾಡಲು ಆಗುವುದಿಲ್ಲ. ಮನೆಯ ಮಾಲೀಕತ್ವವು ಸಾಬೀತು ಆಗದಿದ್ದರೆ ಅದು ಫಲಾನುಭವಿಗೇ ಕಷ್ಟವಾಗುತ್ತದೆ. ಆದ್ದರಿಂದ ಫಲಾನುಭವಿಯ ಹಿತದೃಷ್ಟಿಯಿಂದ ನಿವೇಶನವು ಫಲಾನುಭವಿಯ ಹೆಸರಿನಲ್ಲಿರಬೇಕೆಂದು ತೀರ್ಮಾನಿಸಲಾಗಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ನಿರ್ಮಲ ಜ್ಯೋತಿ ಯೋಜನೆ

4521 (5163) : ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2003-04ನೇ ಸಾಲಿನಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿರ್ಮಲ ಜ್ಯೋತಿ ಯೋಜನೆಯಡಿಯಲ್ಲಿ ಇದ್ದ ಕೊಳಚೆ ಪ್ರದೇಶಗಳು ಯಾವುವು;

ಆ) ಸದರಿ ಸಾಲಿನಲ್ಲಿ ನಿರ್ಮಲಜ್ಯೋತಿ (ಎಸ್.ಯು.ಡಿ.ಪಿ) ಯೋಜನೆಗಾಗಿ ಕೇಂದ್ರ ಸರ್ಕಾರದಿಂದ ಬಂದ ಒಟ್ಟು ಹಣ ಎಷ್ಟು; ಅದರಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿ ಕೊಳಚೆ ಪ್ರದೇಶ ಅಭಿವೃದ್ಧಿಗೆ ಮೀಸಲ್ಪಟ್ಟ ಹಾಗೂ ಈಗಾಗಲೇ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಸಗೀರ್ ಅಹ್ಮದ್ (ವಸತಿ ಸಚಿವರು)

ಅ) 2003–04ನೇ ಸಾಲಿನಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿರ್ಮಲಜ್ಯೋತಿ ಯೋಜನೆ ಅಡಿಯಲ್ಲಿ 33 ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಇದೆ. ಈ ಕಾಮಗಾರಿಗಳನ್ನು ಘೋಷಣೆ ಆಗಿರುವ ಕೊಳಚೆ ಪ್ರದೇಶಗಳಲ್ಲಿ ಮಾತ್ರ ತೆಗೆದುಕೊಳ್ಳಬೇಕಾಗಿರುವುದರಿಂದ ಅಂಥಹ ಕೊಳಚೆ ಪ್ರದೇಶಗಳನ್ನು ಆಯ್ಕೆ ಮಾಡಿ ಸರ್ವೆ ಕಾರ್ಯವನ್ನು ಮಾಡಲಾಗುತ್ತಿದೆ. ಈ ಕೊಳಚೆ ಪ್ರದೇಶಗಳ ಪಟ್ಟಿಯನ್ನು ಲಗತ್ತಿಸಲಾಗಿದೆ. 2ನೇ ವರ್ಷದ (2003–04) ನಿರ್ಮಲಜ್ಯೋತಿ ಯೋಜನೆಗೆ ಸರ್ವೇ ಕಾರ್ಯ ನಡೆದಿದ್ದು ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದೆ.

ಆ) ನಿರ್ಮಲಜ್ಯೋತಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ಅನುದಾನ ಇರುವುದಿಲ್ಲ. ಈ ಯೋಜನೆಯನ್ನು ಶೇಕಡ 80% ಹುಡ್ಕೋ ಸಾಲದ ಮೂಲಕ ಮತ್ತು ಶೇಕಡ 20% ರಾಜ್ಯ ಸರ್ಕಾರದ ಅನುದಾನದಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ಹುಬ್ಬಳ್ಳಿ–ಧಾರವಾಡ ನಗರದಲ್ಲಿ Iನೇ ವರ್ಷದ ಕಾಮಗಾರಿಯು 24 ಕೊಳಚೆ ಪ್ರದೇಶಗಳಿಗೆ ಅಂದಾಜು ಪಟ್ಟಿ ರೂ. 548.36 ಲಕ್ಷಗಳಿಗೆ ಮಂಜೂರು ಮಾಡಲಾಗಿದೆ. Iನೇ ವರ್ಷದಲ್ಲಿ 24 ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿ, ಹಣ ಬಿಡುಗಡೆ ಮಾಡಲಾಗುವುದು.

2ನೇ ವರ್ಷದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಕೊಳಚೆ ಪ್ರದೇಶಗಳ ಪಟ್ಟಿ.

ಎರಡನೇ ವರ್ಷ 2003–04

1. ಅರಳಿಕಟ್ಟೆ
2. ಕುಲಕರ್ಣಿ ಹಕ್ಕಳ್
3. ಗಿರಿರಾಜ ನಗರ
4. ನಂದಗೋಕುಲ
5. ಮಾದವ ನಗರ
6. ಶ್ರೀನಗರ
7. ಮಾವನಗರ
8. ಸಿದ್ಧರಾಮೇಶ್ವರ ನಗರ
9. ಹೆಗ್ಗೆರೆ ಮಾರುತಿ ನಗರ
10. ಹೊಸೂರು ಪ್ಲಾಟ್
11. ಕುಲಕರ್ಣಿ ಹಕ್ಕಳ್
12. ಕುಂಬಾರ ಓಣಿ

13. ನಾರಾಯಣ ಸೋಪ
14. ಬನ್ನಟ್ಟಿ ಕಟ್ಟೆ
15. ಗೋಕುಲ
16. ಗಿರಾಣಿ ಚಾವಲ್
17. ಗುರುಸಿದ್ದೇಶ್ವರ ನಗರ
18. ಇಂದಿರಾ ನಗರ
19. ಕೇಶಾಸುರ
20. ಮಂತೂರ್ ಜೋಪಡಿ
21. ನಾಗರಶೆಟ್ಟಿ ಕೊಪ್ಪಲ್
22. ವಲ್ ವೇಕ್ಕರ್ ಹಕ್ಕಳ್

ಎರಡನೇ ವರ್ಷ 2003-04

ಧಾರವಾಡ

23. ಬಾಲ್ಗಿ ವೃತ
24. ಚೆಪ್ಪರ ಬಾಂಡ್
25. ಗೌಲಿಗಲ್ಲಿ
26. ತಡೆಸಿನ ಕೊಪ್ಪಲ್
27. ಒಡ್ಡರ ಓಣಿ
28. ಯಲ್ಲಾಪುರ್ ನಗರ್ ಕರ್
29. ಕೆಳಗೇರಿ
30. ಮಿಷನ್ ಕಾಂಪೌಂಡ್
31. ಮಂಗಳವಾರ ಪೇಟೆ
32. ಗುಲಗಂಜಿ ಕೊಪ್ಪಲ್
33. ಹೆಬ್ಬಾಳಿ ಅಗಸ್ಸಿ ಸ್ಲಂ

ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಜೂನ್‌ನಲ್ಲಿ ಮರು ಪರೀಕ್ಷೆ

4522 (4807) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 7ನೇ ತರಗತಿಯಿಂದ 11ನೇ ತರಗತಿಯವರೆಗಿನ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಅವರ ಶೈಕ್ಷಣಿಕ ವರ್ಷವನ್ನು ಕಳೆದುಕೊಳ್ಳಬಾರದು ಎಂಬ ಉದ್ದೇಶದಿಂದ ಜೂನ್ ತಿಂಗಳಿನಲ್ಲಿಯೇ ಮರು ಪರೀಕ್ಷೆ ನಡೆಸಿ ಅವರು ವಿದ್ಯಾಭ್ಯಾಸ ಮುಂದುವರೆಸಲು ಅನುಕೂಲ ಮಾಡಿಕೊಡಲಾಗಿದೆಯೇ;

ಆ) ಹಾಗಿದ್ದರೆ, ಈ ಅನುಕೂಲವನ್ನು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಮಾಡಿಕೊಡದೆ ಇರಲು ಕಾರಣವೇನು;